ಹೊಡೆದಿದ್ದಾರೆ. ಅರುಣಾಚಲ ಎನ್ನುವವರಿಗೆ ಕಾಲುವಂಶರಿದು, ಲಾಠಿಯಿಂದ ಹೊಡೆದಿದ್ದಾರೆ. ಇದನ್ನು ನಾವು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದರೂ ಇವರು ಸುಮ್ಮನಿರುವುದನ್ನು ನೋಡಿದರೆ ಆಳುವ ಪಕ್ಷದವರೇ ಇದನ್ನು ಮಾಡಿಸಂತಿದ್ದಾರೇನೋ ಎನ್ನುವ ಅನುಮಾನ ಬರುತ್ತದೆ. ಆದ್ದರಿಂದ ಈ ವಿಚಾರದಲ್ಲಿ ನ್ಯಾಯಾಂಗ ತನಿಖೆಯನ್ನು ಮಾಡಿಸುವುದು ಒಳ್ಳೆಯದೂ. ಈ ರೀತಿ ನ್ಯಾಯಾಂಗ ತನಿಖೆ ನಡೆಸಿದರೆ ಇದರಿಂದ ದುರ್ಬಲವರ್ಗದವರಿಗೆ, ಹರಿಜನಗಿರಿಜನರಿಗೆ, ಮತ್ತು ಕಾಂಗ್ರೆಸ್ ಪಕ್ಷಕ್ಕೆ ಮತ ನೀಡಿದ ಜನರಿಗೆ ನ್ಯಾಯ ದೊರಕಿದಂತಾಗುತ್ತದೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ನಾನಾಕಡೆ ಎಂದರೆ ಸಚಿವರು ಹೇಗೆ ಉತ್ತರ ಕೊಡುವುದು ? ಯಾವುದಾದರೂ ನಿರ್ದಿಷ್ಟ ಪ್ರಕರಣವನ್ನು ಹೇಳಿದರೆ ಸಚಿವರು ಉತ್ತರ ಕೊಡಲು ಅನುಕೂಲವಾಗುತ್ತದೆ.

ಒಬ್ಬ. ಮಾನ್ಯ ಸದಸ್ಯರು.—ಸ್ವಾಮಿ, ಹೊನ್ನಾಳಿ, ತೀರ್ಥಹಳ್ಳಿ, ಹೊಸನಗರ, ಇನ್ನೂ ಮುಂತಾದ ಕಡೆಗಳಲ್ಲಿ ಈ ರೀತಿ ಕಿರುಕುಳ ನಡೆಯುತ್ತಿದೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ಇಂಥ ಅನೇಕ ಪ್ರಕರಣಗಳು ನಮ್ಮ ಗಮನಕ್ಕೆ ಬಂದಿವೆ. ಸಮಯ ಬಂದಾಗ ಸ್ಥಳ, ತಾರೀಖು, ಮತ್ತು ಯಾವ ಪೋಲೀಸ್ ಠಾಣೆಯಲ್ಲಿ ನಡೆದಿದೆ ಇನ್ನೂ ಮುಂತಾದುದನ್ನೆಲ್ಲಾ ಹೇಳುತ್ತೇವೆ. ನಾವು ಈ ವಿಚಾರದಲ್ಲಿ ನಮ್ಮ ಪಕ್ಷದಲ್ಲಿ ಸದಸ್ಯರ ಜೊತೆ ಚರ್ಚೆಮಾಡಿದ್ದೇವೆ. ರಾಜ್ಯದ ೧೯ ಜಿಲ್ಲೆಗಳಿಂದಲೂ ಇಂಥ ದೂರುಗಳು ನಮಗೆ ಬಂದಿವೆ. ಅಲ್ಲಿರತಕ್ಕ ವರೇ ಇದನ್ನು ಮಾಡಿಸುತ್ತಿದ್ದಾರೆಂದು ಅಲ್ಲ. ಒಟ್ಟಿನಲ್ಲಿ ಕಾಂಗ್ರೆಸ್‌ನವರಿಗೆ ಮತ ಕೊಟ್ಟ ಜನರಿಗೆ ಕಿರುಕುಳ ಜಾಸ್ತಿ ಆಗುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಇದಕ್ಕೆ ಸಮಯ ಬಂದಾಗ ನಾವು ಸಾಕ್ಷ್ಯಾಧಾರಗಳನ್ನು ಒದಗಿಸುತ್ತೇವೆ.

ಅಧ್ಯಕ್ಷರು.—ನಿರ್ದಿಷ್ಟ ಪ್ರಕರಣಗಳನ್ನು ಹೇಳಿದರೆ ಸಚಿವರು ಉತ್ತರ ಕೊಡಲು ಅನುಕೂಲ ವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಂದರ್ಭ ಬಂದಾಗ ಸ್ಪಷ್ಟವಾಗಿ ಹೇಳುತ್ತೇವೆ. ನಮ್ಮ ಅಭಿಪ್ರಾಯ ಏನೆಂದರೆ ಇಂಥ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಾಗಲೂ ಸುಮ್ಮನಿದ್ದರೆ ಇಂಥಾದ್ದು ಇನ್ನೂ ಹೆಚ್ಚು ಹೆಚ್ಚು ಆಗುತ್ತವೆ. ಉದಾಹರಣೆಗೆ ಹೇಳುವುದಾದರೆ, ಚನ್ನರಾಯ ಪಟ್ಟಣದಲ್ಲಿ ಕಾಂಗ್ರೆಸ್‌ಗೆ ಮತ ಕೊಟ್ಟ ಜನರನ್ನು ಸಿಕ್ಕಾಪಟ್ಟೆ ಹೊಡೆದಿದ್ದಾರೆಂದು ಮಾನ್ಯ ಶ್ರೀಕಂಠಯ್ಯನವರು ತಿಳಿಸಿದ್ದಾರೆ. ಕಡೂರಿನಿಂದ ಸ್ವತಂತ್ರ ಅಭ್ಯರ್ಥಿಯಾಗಿ ಗೆದ್ದುಬಂದಿರುವ ಶ್ರೀ ಓಂಕಾರಮೂರ್ತಿಯವರ ಎದುರಿಗೆ ಸಿಕ್ಕಾಪಟ್ಟೆ ಜನರನ್ನು ಹೊಡೆದಿದ್ದಾರೆ.

ಅಧ್ಯಕ್ಷರು.—ಗಮನ ಸೆಳೆಯುವ ಸೂಚನೆ ಮೇರೆಗೆ ಅಥವಾ ಇನ್ನೂ ಬೇರೆ ಯಾವುದಾದರೂ ರೀತಿಯಲ್ಲಿ ತಾವು ಇದನ್ನು ಕಳಂಹಿಸಿಕೊಟ್ಟಿದ್ದಿದ್ದರೆ ಅದಕ್ಕೆ ನಾವು ಅವಕಾಶವನ್ನು ಕೊಡುತ್ತಿದ್ದೆ.

ಶ್ರೀ ಎಸ್. ಬಂಗಾರಪ್ಪ.—ಇದನ್ನು ಬೇರೆರೀತಿಯಲ್ಲಿ ತರಬೇಕೆಂದರೆ ತರುತ್ತೇವೆ.

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೆ, ನಿಯಮ ೩೩ಳಿರ ಪ್ರಕಾರ ಕಳುಹಿಸಂವುದಕ್ಕೆ ಬದಲಾಗಿ ಗಮನ ಸೆಳೆಯುವ ಸೂಚನೆ ಮೂಲಕ ವಿಷಯವನ್ನು ತಂದಿದ್ದರೆ ಉತ್ತರ ಕೊಡಲು ಅನುಕೂಲ ವಾಗುತ್ತಿತ್ತು. ಹಳ್ಳಿಗಾಡಿನಲ್ಲಿ, ತಾಲೂಕು ಕೇಂದ್ರಗಳಲ್ಲಿ ಆಳುವ ಪಕ್ಷದವರು ವಿರೋಧಪಕ್ಷದ ಕಡೆಯ ವರಿಗೆ ಹೊಡೆಸುತ್ತಿದ್ದಾರೆ ಎಂದು ತಾವು ಏನು ಹೇಳುತ್ತಿದ್ದೀರಿ ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ.

(XIV) ಮಲೆನಾಡಂ ಕ್ಷೇತ್ರದಲ್ಲಿ ಜನರಿಗೆ ಉರುವಲು ತರಲು ಅವಕಾಶ ಕೊಡುವ ಬಗ್ಗೆ

ಶ್ರೀ ಪಟಮಕ್ಕಿ ರತ್ನಾಕರ (ತೀರ್ಥಹಳ್ಳಿ).—ಸ್ವಾಮಿ ಅಧ್ಯಕ್ಷರೆ, ಮಲೆನಾಡಂ ಕ್ಷೇತ್ರದಲ್ಲಿ ಅದರಲ್ಲೂ ತೀರ್ಥಹಳ್ಳಿ, ಹೊಸನಗರ, ಸೊರಬ, ಚಿಕ್ಕಮಗಳೂರು, ಈ ಭಾಗದಲ್ಲಿ ದೊಡ್ಡ ಅರಣ್ಯ ಪ್ರದೇಶ ಇದೆ. ಈ ಅರಣ್ಯ ಪ್ರದೇಶದಲ್ಲಿ ಬಹಳಷ್ಟು ಒಣಗಿದ ಮರಗಳು ಇದ್ದು ಬೆಂಕಿ ಬಿದ್ದಾಗ ಅವೆಲ್ಲಾ ಸುಟ್ಟುಹೋಗಂತಿವೆ. ಆದರೆ ಆ ಭಾಗದ ಜನರು ಉರುವಲು ಗೋಸ್ಕರ ಅಂಥ ಒಣಗಿದ ಮರಗಳನ್ನು ತರುವುದಕ್ಕೆ ಹೋದರೆ ಅರಣ್ಯ ಇಲಾಖೆಯವರು ಆ ಹೆರಗಸರು ಮಕ್ಕಳಿಗೆ ಹಿಂಸೆ ಕೊಡುತ್ತಿದ್ದಾರೆ.

ಇದರ ಬಗ್ಗೆ ಮಾನ್ಯ ಸಚಿವರು ಅರಣ್ಯ ಇಲಾಖೆಯವರಿಗೆ ಸೂಕ್ತ ನಿರ್ದೇಶನ ಕೊಟ್ಟು ಒಣ ಮರಗಳನ ಉರುವಲಿಗೆ ತರಲು ಜನರಿಗೆ ಅವಕಾಶಕೊಡುವಂತೆ ಹೇಳುತ್ತಾರೆಯೇ ?

ಶ್ರೀ ಬಿ. ಎ. ಜೀವಿಜಯ —ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ವಿಷಯವನ ಗಮನಕ್ಕೆ ತೆಗೆದುಕೊಂಡು ಆ ಭಾಗದ ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ಕೊಡ ತ್ತೇನೆ.

12-00 Noon

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ ಈ ಕಟ್ಟಿಗೆ ವಿಚಾರದಲ್ಲಿ ನಾನು ಒಂದು ಸಲ ಯನ್ನು ಈ ಸಂದರ್ಭದಲ್ಲಿ ಮಾಡಲು ಇಚ್ಛಿಪಡುತ್ತೇನೆ. ಯಾವುದೇ ಪಕ್ಷ ಸರ್ಕಾರವನ್ನು ನಡೆಸ ತ್ತಿದ್ದರೂ ಕೂಡ ಇದು ಪದೇ ಪದೇ ಬಂದಿರತಕ್ಕಂಥ ವಿಚಾರವಾಗಿರುತ್ತದೆ. ಅದರಲ್ಲೂ ಮಲೆನಾಡ ಭಾಗದಲ್ಲಿ ಇದು ಒಂದು ಸಮಸ್ಯೆಯಾಗಿದ್ದು ವಿಶೇಷವಾಗಿ ಚರ್ಚೆಯಾಗಿದೆ. ಇದಕ್ಕೆ ಸಂಬಂಧಪಟ ಸದಸ್ಯರು ಯಾರೇ ಆಗಲಿ ಇತ್ತ ಕಡೆ ಕುಳಿತಿರುವವರಾಗಲಿ ಅತ್ತ ಕಡೆ ಕುಳಿತಿರುವ ಸದಸ್ಯರಾಗಲಿ ಈ ಸಮಸ್ಯೆಗೆ ಒಂದು ಪರಿಹಾರವನು ಹುಡುಕತಕ್ಕಂಥ ಯೋಚನೆ ಮಾಡಿದರೆ ಒಳ್ಳೆಯದೆಂದು ನಾನ ಹೇಳುತ್ತೇನೆ. ಕಾಡಿನಿಂದ ಕಟ್ಟಿಗೆಯನ್ನು ತರುವುದೇ ಸೀಡವೆಂದು ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ ಇದು ಒಂದು ಅನಿವಾರ್ಯವಾದ ಪ್ರಶ್ನೆ. ದಯವಿಟ್ಟು ಈ ವಿಚಾರದಲ್ಲಿ ಈ ಅಧಿವೇಶನವು ಮುಗಿಯು ದರೊಳಗೆ ಎರಡೂ ಕಡೆಯ ಮಾನ್ಯ ಸದಸ್ಯರುಗಳನ್ನು ಕರೆದು ಚರ್ಚೆಮಾಡಿ ಒಂದು ತೀರ್ಮಾನ ಮಾಡಿದ ಒಳ್ಳೆಯದೆಂದು ಹೇಳುತ್ತೇನೆ. ದಯವಿಟ್ಟು ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ಎಂಬುದನ ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಬಿ. ಎ. ಜೀವಿಜಯ (ಅರಣ್ಯ ಸಚಿವರು) —ಮಾನ್ಯ ಅಧ್ಯಕ್ಷರೇ ಈಗಾಗಲೇ ಉರುವಲ ಕಟ್ಟಿಗೆಯ ಬಗ್ಗೆ ಕಳೆದಸಾರಿ ವಿಧಾನ ಸಭೆಯ ಸದಸ್ಯರನ್ನು ಕರೆದು ತೀರ್ಮಾನ ಮಾಡಿದ್ದೇವೆ. ಒಣಗಿ ಸಾಲೆಯನ್ನು ಉರುವಲು ಕಟ್ಟಿಗೆ ಎಂದು ಹೇಳುವುದಲ್ಲಿ ಯಾವ ಅಭ್ಯಂತರವೂ ಇಲ್ಲ. ಆದರೆ ಅನೇ ಸಂದರ್ಭಗಳಲ್ಲಿ ಅರಣ್ಯಕ್ಕೆ ಹೋದವರು ಬೆಲೆಬಾಳತಕ್ಕಂಥ ಮರಗಳ ಸಸಿಗಳನ್ನು ಕಡಿದು ತರುತ್ತಾರ ಇದನ್ನು ತಡೆಗಟ್ಟುವಸಲುವಾಗಿ ಅರಣ್ಯ ಇಲಾಖಾಧಿಕಾರಿಗಳು ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳ ತ್ತಿರುತ್ತಾರೆ. ಇದಲ್ಲದೆ ಮಲೆನಾಡುಪ್ರದೇಶಗಳಲ್ಲಿ ಉರುವಲು ಕಟ್ಟಿಗೆಯ ಅಭಾವವನ್ನು ನೀಗಿಸು ಸಲುವಾಗಿ ಅರಣ್ಯ ಪ್ರದೇಶಗಳಲ್ಲಿ ದೊರೆಯತಕ್ಕಂಥ ಒಣಗಿದ ಉರುವಲು ಕಟ್ಟಿಗೆಗಳನ್ನು ಅರಣ ಇಲಾಖೆಯವರೇ ತಂದು ಜನಸಾಮಾನ್ಯರಿಗೆ ವಿತರಣೆ ಮಾಡತಕ್ಕಂಥ ಒಂದು ಕಾರ್ಯಕ್ರಮವನ್ನು ಕೂ ಕೈಗೊಂಡಿರತಕ್ಕಂಥದ್ದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಮಾನ್ಯ ವಿರೋಧಪಕ್ಷದ ನಾಯ ರಾದ ಶ್ರೀ ಎಸ್. ಬಂಗಾರಪ್ಪನವರು ಎಲ್ಲ ಸದಸ್ಯರ ಸಭೆಯನ್ನು ಕರೆದು ಚರ್ಚೆಮಾಡಿ ಅಭಿಪ್ರಾಯ ವನ್ನು ತಿಳಿದುಕೊಳ್ಳಬೇಕೆಂದು ಏನು ಸಲಹೆಯನ್ನು ಕೊಟ್ಟಿರುತ್ತಾರೆ, ಅದರಂತೆ ಎಲ್ಲ ಮಾನ್ಯ ಸದಸ್ಯ ಸಭೆಯನ್ನು ಕರೆದು ಎಲ್ಲರ ಅಭಿಪ್ರಾಯವನ್ನು ತಿಳಿದುಕೊಳ್ಳಲು ಸೂಕ್ತ ಕ್ರಮವನ್ನು ತೆಗೆದುಕೊಳ್ಳೇ ತ್ತೇನೆಂದು ಹೇಳುತ್ತೇನೆ.

(XV) ರೈತರು ಪಿ.ಎಲ್.ಡಿ. ಬ್ಯಾಂಕ್ ಸಾಲವನ್ನು ಮನ್ನಾ ಮಾಡುವ ಬಗ್ಗೆ

ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಅಧ್ಯಕ್ಷರೇ, ೧೦ ಎಕರೆ ಜಮೀನು ಉಳ್ಳವರು ಕೂ ಯಾವುದೇ ಬ್ಯಾಂಕ್‌ನಿಂದ ಸಾಲ ಪಡೆದಿದ್ದರೂ ಆ ಸಾಲವನ್ನು ಕಟ್ಟಲು ಸರ್ಕಾರದವರು ಮನ್ನಾ ಮಾ ಘೋಷಣೆಯನ್ನು ಹೊರಡಿಸಿದೆ. ಹೇಗೆ ಘೋಷಣೆ ಮಾಡಿದ್ದರೂ ಕೂಡ ಪಿ.ಎಲ್.ಡಿ. ಬ್ಯಾಂಕ್‌ನವರ ರೈತರು ಪಡೆದ ಸಾಲವನ್ನು ಕಂತುಗಳ ಮುಖಾಂತರವಾಗಿ ಕಟ್ಟಬೇಕೆಂದು ತಿಳಿಸಿದೆ. ಪಿ.ಎಲ್.ಡಿ ಬ್ಯಾಂಕ್‌ಗೆ ಯಾವುದೇವಿಧವಾದ ಸರ್ಕಾರಿ ಆಜ್ಞೆಯೂ ಹೋಗಿಲ್ಲವಾದ್ದರಿಂದ ರೈತರು ತೆಗೆದುಕೊಂ ಸಾಲವನ್ನು ಬಲಾತ್ಕಾರವಾಗಿ ಕಂತುಗಳ ಮೂಲಕ ವಸೂಲು ಮಾಡುತ್ತಿದೆ. ಇದನ್ನು ತಕ್ಷಣ ನಿಲ್ಲಿ ಬೇಕು. ಒಂದು ಕಂತನ್ನು ಕೂಡ ಕಟ್ಟದೆ ಇರತಕ್ಕಂಥ ರೈತರು ಇನ್ನು ಮುಂದೆ ಕಂತನ್ನು ಕಟ್ಟ ಬೇಕಾಗಿಲ್ಲವೆಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಬೇಕೆಂದು ಸಲಹೆ ಮಾಡುತ್ತೇನೆ. ಮತ್ತೆ ಈಗಾಗಲೆ ಪಿ.ಎಲ್.ಡಿ. ಬ್ಯಾಂಕ್‌ನವರು ವಸೂಲು ಮಾಡಿರತಕ್ಕಂಥ ಸಾಲವನ್ನು ವಾಪಸ್ ಕೊಡುವಂತೆಯೂ ಸರ್ಕಾರದವರು ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮಮೂಲಕ ಸರ್ಕಾರದ ಗಮನಕ್ಕೆ ತರಬಯಸು ತ್ತೇನೆ.